# ಕೃಷಿ ಸಂಸ್ಕೃತಿ

'ಅಗ್ರಿಕಲ್ಚರ್' ಎಂಬುದಕ್ಕೆ ಸಮಾನಾರ್ಥಕಗಳಾಗಿ ಕನ್ನಡದಲ್ಲಿ ಕೃಷಿ, ವ್ಯವಸಾಯ, ಬೇಸಾಯ, ಒಕ್ಕಲುತನ– ಹೀಗೆ ಹಲವು ಪದಗಳು ಬಳಕೆಯಾಗುತ್ತಿವೆ. ಅಗ್ರಿಕಲ್ಚರ್ ಎಂಬುದರಲ್ಲಿ 'ಕಲ್ಚರ್' ಎಂಬುದೂ ಸೇರಿಕೊಂಡಿರುವುದರಿಂದ 'ಕೃಷಿ ಸಂಸ್ಕೃತಿ' ಎಂಬ ಮಾತನ್ನೂ ಬಳಸಬಹುದೆನ್ನಿಸುತ್ತದೆ. ಕೇವಲ ವಾಣಿಜ್ಯ ದೃಷ್ಟಿಯಿಂದ ಕೃಷಿಯನ್ನು ಪರಿಭಾವಿಸುವುದನ್ನು ಭಾರತೀಯ ಮನಸ್ಸು ಒಪ್ಪುವುದಿಲ್ಲ, ನಮ್ಮವರ ದೃಷ್ಟಿಯಲ್ಲಿ ಕೃಷಿಯೆಂಬುದು ಭಕ್ತಿ, ಶ್ರದ್ಧೆಗಳಿಂದ ಕೂಡಿದ ಒಂದು ಕೈಂಕರ್ಯ. ಉತ್ತುವ, ಬಿತ್ತುವ, ಬೆಳೆಯುವ ಕೆಲಸಗಳನ್ನು ನಮ್ಮ ಹಿರಿಯರು ಧಾರ್ಮಿಕ ಹಾಗೂ ಸಾಂಸ್ಕೃತಿಕ ಹಿನ್ನೆಲೆಯೊಂದಿಗೇ ನಿರ್ವಹಿಸುತ್ತಿದ್ದರು. ಮುಹೂರ್ತ ನೋಡಿ ಬೀಜ ಬಿತ್ತುವುದು, ಶುಭದಿನಗಳಲ್ಲಿ ಪೈರನ್ನು ಪೂಜಿಸಿ, ಕಟಾವು ಪ್ರಾರಂಭಿಸುವುದು, ಕಣದಲ್ಲಿನ ಧಾನ್ಯರಾಶಿಗೆ ಪೂಜೆ ಮಾಡಿದ ನಂತರವೇ ಶೇಖರಿಸಿಡುವುದು– ಹೀಗೆ ವ್ಯವಸಾಯ ಕ್ರಿಯೆಯ ಹಂತ ಹಂತಗಳಲ್ಲಿ ಭಕ್ತಿ, ಶ್ರದ್ಧೆ ಪಕ್ರಟವಾಗುತ್ತಿತ್ತು. ಭೂಮಿ ಹುಣ್ಣಿಮೆ, ದೀಪಾವಳಿ, ಹುತ್ತರಿ ಹಬ್ಬ ಮೊದಲಾದ ಸಂದರ್ಭಗಳಲ್ಲಿ ಭೂಮಿಯನ್ನು ಕುರಿತು, ಕೃಷಿಗೆ ಸಂಬಂಧಿಸಿದ ಪರಿಕರಗಳನ್ನು ಕುರಿತು, ಅದಕ್ಕೆ ನೆರವಾಗುವ ಪಶುಗಳನ್ನು ಕುರಿತು ಕೃತಜ್ಞತೆ, ಭಕ್ತಿ, ಗೌರವಗಳು ಪ್ರಕಟವಾಗಬೇಕೆಂಬುದು ನಮ್ಮ ಹಿರಿಯರ ಆಶಯವಾಗಿತ್ತು. 'ಬೆಳಗಾಗಿ ನಾನೆದ್ದು ಯಾರ್ಯಾರ ನೆನೆಯಲಿ?' ಎಂದು ಕೇಳಿಕೊಳ್ಳುವ ನಮ್ಮ ಜನಪದರು 'ಎಳ್ಳು ಜೀರಿಗೆ ಬೆಳೆಯುವ ಭೂಮಿ ತಾಯಿಯನ್ನೇ' ಮೊದಲು ನೆನಪು ಮಾಡಿಕೊಳ್ಳುತ್ತಿದ್ದುದೂ ಇದೇ ಕಾರಣಕ್ಕಾಗಿ.



ವಾಣಿಜ್ಯೀಕರಣಕ್ಕೆ ಒಳಗಾಗದ ವ್ಯವಸಾಯ ಹಲವಾರು ಸಾಮಾಜಿಕ, ಸಾಂಸ್ಕೃತಿಕ ಮೌಲ್ಯಗಳನ್ನೊಳಗೊಂಡಿರುತ್ತದೆ. ಶ್ರದ್ಧಾವಂತ ಕೃಷಿಕ ಶರೀರಶ್ರಮವನ್ನು ಒಂದು ಮೌಲ್ಯವೆಂದು ಪರಿಗಣಿಸುತ್ತಾನೆ, ದೈಹಿಕ ದುಡಿಮೆಯಿಂದ ಗಳಿಸುವ ಅನ್ನ ಆತನ ಪಾಲಿಗೆ ಅಮೃತವಾಗುತ್ತದೆ. ಆದ್ದರಿಂದಲೇ ತನ್ನಷ್ಟಕ್ಕೆ ತಾನು ದುಡಿಯುತ್ತಾ, ಬದುಕುವ, ಹಾಗೆಯೇ ಇತರರನ್ನು ಬದುಕಿಸುವ ರೈತನನ್ನು ಕುವೆಂಪುರವರು 'ನೇಗಿಲ ಯೋಗಿ' ಎಂದು ಕರೆದಿರುವುದು, ಗಾಂಧೀಜಿಯವರು ಸ್ವೀಕರಿಸಿದ್ದ ಏಕಾದಶ ವ್ರತಗಳಲ್ಲಿ ಶರೀರ ಶ್ರಮವೂ ಒಂದು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಯಾಂತ್ರೀಕರಣಗೊಳ್ಳುವ ಮೊದಲು ಕೃಷಿ ಎಂಬುದು ಸಮುದಾಯದಲ್ಲಿ ಸಾಮರಸ್ಯ, ಸಹಕಾರ ಮುಂತಾದ ಗುಣಗಳನ್ನು ಪ್ರೇರಿಸುವ ಒಂದು ವೃತ್ತಿಯಾಗಿತ್ತು. ಕುಟುಂಬದ ಹಾಗೂ ಸಮಾಜದ ಸದಸ್ಯರು ಒಗ್ಗಟ್ಟಾಗಿ ದುಡಿದಾಗ ವ್ಯವಸಾಯ ಸುಲಭವಾಗುತ್ತಿತ್ತು; 'ಸಫಲ' ವೆನ್ನಿಸಿಕೊಳ್ಳುತ್ತಿತ್ತು. ಗ್ರಾಮೀಣ ಉಪಕಸಬುಗಳಾದ ಬಡಗಿತನ, ಕಮ್ಮಾರಿಕೆ, ಕುಂಬಾರಿಕೆ ಇಂಥವೆಲ್ಲವೂ ಕೃಷಿಗೆ ಪೂರಕವಾಗಿ ಬೆಳೆದು, ಗ್ರಾಮ ಜೀವನ ಸುಂದರವಾಗಿ, ವ್ಯವಸ್ಥಿತವಾಗಿ ರೂಪುಗೊಳ್ಳುತ್ತಿತ್ತು. ಕೃಷಿಯ ಬುನಾದಿಯ ಮೇಲೆ ನಿಂತ ಬದುಕು ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಅರಳಿಕೊಳ್ಳಲು ಸಾಧ್ಯವಾಗುತ್ತಿತ್ತು.

ಇವತ್ತು ವ್ಯವಸಾಯವೆಂಬುದು ಬದುಕಿನ ಬೇರೆಲ್ಲ ಕ್ಷೇತ್ರಗಳಂತೆ, ಮೌಲ್ಯ ಪ್ರಜ್ಞೆಯನ್ನು ಕಳೆದುಕೊಳ್ಳುತ್ತಿದೆ. ಹೆಚ್ಚು ಬೆಳೆ ಪಡೆಯಬೇಕೆಂಬ ಆತುರದಲ್ಲಿ ರಾಸಾಯನಿಕ ಗೊಬ್ಬರಗಳನ್ನು ಉಪಯೋಗಿಸಿ, ಭೂಮಿಯ ಫಲವಂತಿಕೆಯನ್ನೇ ಮೊಟಕುಗೊಳಿಸಲಾಗುತ್ತಿದೆ. ಭೂಮಿಯನ್ನು ಕುರಿತಾದ ಭಕ್ತಿ, ಕೃತಜ್ಞತೆಗಳು ಈ ಕಾಲದಲ್ಲಿ ಕಾಲಹತ out dated ಮೌಲ್ಯಗಳಾಗಿವೆ. ಉತ್ತುವ ಬಿತ್ತುವ, ಕಳೆ ತೆಗೆಯುವ, ಕಟಾವು ಮಾಡುವ ಎಲ್ಲ ಪ್ರಕ್ರಿಯೆಗಳಲ್ಲೂ ಆಧುನಿಕ ರೈತ ಯಂತ್ರಗಳನ್ನೇ ಬಳಸುತ್ತಿದ್ದಾನೆ. ಇದರಿಂದಾಗಿ ಶ್ರಮ ಸಂಸ್ಕೃತಿ, ಸಮುದಾಯ ಸಹಕಾರ ಮರೆಯಾಗುವಂತಾಗಿದೆ. ಧಾನ್ಯಗಳಿಗಿಂತಲೂ, ಹೆಚ್ಚು ಹಣ ಗಳಿಸಲು ಸಹಕಾರಿಯಾಗುವ ವಾಣಿಜ್ಯ ಬೆಳೆಗಳಿಗೇ ಕೃಷಿಕ ಮಹತ್ವ ಕೊಡುತ್ತಿದ್ದಾನೆ. ಎಲ್ಲಕ್ಕೂ ಮುಖ್ಯವಾಗಿ ಗ್ರಾಮೀಣ ಯುವಜನ ಹೆಚ್ಚು ಗಳಿಸುವ ಪ್ರಲೋಭನೆಯಿಂದ ನಗರಾಭಿಮುಖಿಗಳಾಗಿದ್ದಾರೆ. ಸರ್ಕಾರವೂ ಈ ಕುರಿತು ಚಿಂತಿಸುತ್ತಿಲ್ಲ. ಭೂಮಿಯನ್ನು ನಿರ್ಲಕ್ಷಿಸುತ್ತಿರುವ ನಾವು ನಮ್ಮ ಬುನಾದಿಯನ್ನೇ ಕಳೆದುಕೊಳ್ಳುತ್ತಿದ್ದೇವೆ, ಅಲ್ಲವೇ?

■ ವೈನತೇಯ

# ಮಾತೇ ಮುತ್ತು

★ ದೇವರು ಯಾರನ್ನಾದರೂ ನಾಶ ಮಾಡಬೇಕೆಂದರೆ ಮೊದಲು ಅವರ ವಿವೇಕವನ್ನು ಹಾಳು ಮಾಡುತ್ತಾನೆ.
-ಯೂರಿಪಿಡೀಸ್

★ ವಿವೇಕವೆಂದರೆ ಬಿಡಿಸಿ ನೋಡುವುದು, ವಿಶ್ಲೇಷಿಸುವುದು, ತೂಗುವುದು, ಅಳೆಯುವುದು.
-ಗೋಪಾಲಕೃಷ್ಣ ಅಡಿಗ

★ ಯೋಗ್ಯವಾದ ವೈದ್ಯ ತಾನು ವಾಸಿಮಾಡಬಲ್ಲದ್ದು ಯಾವುದು, ಮಾಡಲಾರದ್ದು ಯಾವುದು ಎಂದು ತಿಳಿದವನು.
-ಜೋಸೆಫ್ ಕೋವನ್

★ ಶಕ್ತಿ, ದೈಹಿಕ ಬಲದಿಂದ ಬರುವುದಿಲ್ಲ; ಅದು ಬರುವುದು ಅದಮ್ಯವಾದ ಇಚ್ಛಾಶಕ್ತಿಯಿಂದ.
-ಮಹಾತ್ಮ ಗಾಂಧೀಜಿ

★ ಕಲಿಕೆ ವಿಷಯ ಬರಿಯ ತಿಳಿವಳಿಕೆಯ ಮಟ್ಟದಲ್ಲಿ ಉಳಿಯದೆ ಹೆಚ್ಚು ಅರ್ಥಪೂರ್ಣ ಮಾಡಬಲ್ಲ ಮನುಷ್ಯನೊಬ್ಬ ಬೇಕು. ಆತನೇ ಕೋಚ್ ಅಥವಾ ಗುರು.
-ಪಿ.ಲಂಕೇಶ್

★ ಸ್ವಾರ್ಥಿಗಳೂ ದುರಹಂಕಾರಿಗಳೂ ಆದ ಕೆಲವರು ತಮ್ಮ ಸಾಮಾಜಿಕ ಸ್ಥಾನ ಬಲದಿಂದ ಈ ಜಾತಿ– ಭೇದಗಳನ್ನು ನಿರ್ಮಿಸಿ ದುರ್ಬಲ ವರ್ಗಗಳ ಮೇಲೆ ಅವುಗಳನ್ನು ಒತ್ತಾಯದಿಂದ ಹೇರಿದರು.
-ಬಿ.ಆರ್.ಅಂಬೇಡ್ಕರ್

★ ವಿವೇಕಿಗಳು ತಮ್ಮ ಶತ್ರುಗಳಿಂದ ಅನೇಕ ವಿಷಯಗಳನ್ನು ಕಲಿಯುತ್ತಾರೆ.
-ಅರಿಸ್ಟೋಫೇನಸ್

★ ಶತ್ರು ಸೋಲುತ್ತಾನೆ; ಮಿತ್ರ ವಾದ ಮಾಡುತ್ತಾನೆ.
-ರಷ್ಯಾ ಗಾದೆ

★ ನಿಜವಾದ ಶಾಂತಿ ಎಂದರೆ ಎಲ್ಲ ಚಟುವಟಿಕೆಗಳನ್ನು ಬಿಡುವುದೆಂದಲ್ಲ; ಚಟುವಟಿಕೆಗಳಲ್ಲಿಯೇ ಶಾಂತಿಯನ್ನು ಕಂಡುಕೊಳ್ಳುವುದು.
-ರಾಮದಾಸ್

★ ಸ್ತ್ರೀಯನ್ನು ಪ್ರೀತಿಸುವಷ್ಟೇ ಶೀಲವನ್ನು ಪ್ರೀತಿಸುವವನನ್ನು ನಾನು ಈವರೆಗೆ ಕಂಡಿಲ್ಲ.
-ಕನ್‌ಫ್ಯೂಷಿಯಸ್

★ ಇಂದು ಪ್ರಪಂಚವೇ ಒಪ್ಪಿಕೊಳ್ಳುವ, ಒಪ್ಪಿಕೊಳ್ಳ ಬೇಕಾದ 'ಒಂದು ಸತ್ಯ' ಎಂಬುದು ಇಲ್ಲ.
-ಪು.ತಿ.ನರಸಿಂಹಾಚಾರ್

★ ಕಂಡಷ್ಟೂ ಸತ್ಯವಿರಬಹುದು, ಕಂಡಷ್ಟೇ ಸತ್ಯವಲ್ಲ.
-ಕೆ.ಎಸ್.ನಿಸಾರ್ ಅಹಮದ್

★ ಸತ್ಯ ಹೇಳಲು ಇಬ್ಬರಾದರೂ ಇರಬೇಕು; ಒಬ್ಬ ಹೇಳಲು, ಇನ್ನೊಬ್ಬ ಕೇಳಲು.
-ಹೆನ್ರಿ ಡೇವಿಡ್ ಥೋರೋ

★ ಹೊಸ ಸತ್ಯಗಳು ದೈವದ್ರೋಹ ಎನಿಸಿಕೊಂಡು ಹುಟ್ಟುತ್ತವೆ; ಮೂಢನಂಬಿಕೆಗಳಾಗಿ ಸಾಯುತ್ತವೆ.
-ಟಿ.ಎಚ್.ಹಕ್ಸಲಿ

★ ಸೋತಕಡೆ ಪ್ರಹಾರ ಮಾಡಬೇಕು.
-ಶ್ರೀಕೃಷ್ಣ

★ ಶಾಲೆಯಲ್ಲಿ ಮಾತ್ರವೇ ಕಲಿತ ಮಗು– ಅವಿದ್ಯಾವಂತ ಮಗು.
-ಚತುರೋಕ್ತಿ